# ರಂಗನ ನೋಡಿರೆ ರಾಜಕುವರ ನರಸಿಂಗ

(version – 1)

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, Page No. 491.
2. **Ref.:** Purandara Sahitya Darshana, Samputa 1, Jeevana Darshana edited by Prof. S.K. Ramachandra Rao, Page No. 318.
3. **Ref.:** Shri Purandara Dasara Sahitya Part – 3, Mahatmya Gnyana, edited by Shri Betageri Krishna Sharma and Shri Bengeri Huchha Rayaru, Page No. 88.
4. **Note:** There are two versions available which have different wordings and no. of stanzas. Both the lyrics are being followed by many singers. Hence, they are listed separately as Version – 1 and Version – 2.
5. **Note:** Version – 1 (rangana nODire rAja kuvara) is as per Ref. 1 and Ref. 2. Singer has followed these wordings.
6. **Note:** Version – 2 (rangana nODire rAya-chenniga) is as per Ref. 3. Singer has followed these wordings.
7. **Note:** Ankita is same in both the versions.
8. **Note:** One more observation: As per authors of Ref. 2, Version-1 song may be written/sung in Tirupati. But, as per authors of Ref. 3, Version-2 song may be written/sung in Srirangapatna, Karnataka.

ರಾಗ: ನಾದನಾಮಕ್ರಿಯಾ ತಾಳ: ಅಟ

ರಂಗನ ನೋಡಿರೆ ರಾಜಕುವರ ನರ-
ಸಿಂಗ ದೇವ ನಮ್ಮ ದೇವಕಿ ಸುತನ || ಪ ||

ಹಮ್ಮಿನ ತಾಯಿತ ತೋಳ ಭಾಪುರಿಯೊ
ಘಮ್ಮನೆ ಘಲ್ಲೆಂಬ ಗೆಜ್ಜೆಯ ಧ್ವನಿಯೊ
ಸುಮ್ಮ ಹಿಮನ ಕಿವಿಯಲ್ಲಿ ಚೌಕುಳಿಯೊ
ತಿಮ್ಮರಾಯನಿಟ್ಟ ಸೊಬಗಿನ ಬಗೆಯೊ || ೧ ||

ಶುಕ್ಕರವಾರದ ಪೂಜೆಗೊಂಬವನ
ಸಕ್ಕರೆ ಪಾಲ್ ಮೊಸರು ಬೆಣ್ಣೆ ಮೆಲ್ಲುವನ
ಘಕ್ಕನೆ ಸುರರಿಗೆ ಅಮೃತವಿತ್ತವನ
ರಕ್ಕಸ ಕುಲ ವೈರಿ ರಾವಣಾಂತಕನ || ೨ ||

ಪಾಪವಿನಾಶಿನಿ ಸ್ನಾನವ ಮಾಡಿ
ಪಾಪಗಳೆಲ್ಲವು ಬೇಗ ಬಿಟ್ಟೋಡಿ
ಈ ಪರಿ ದಿನ ದಿನ ಮೂರುತಿ ನೋಡಿ
ಶ್ರೀಪತಿ ಪುರಂದರ ವಿಠಲನ ಪಾಡಿ || ೩ ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ಹಮ್ಮಿನ** – ಹೆಮ್ಮೆಯ, ಎದ್ದು ಕಾಣುವ.

**ಬಾಪುರಿ** – ಬಾಹುಪೂರ, ತೋಳಿನಲ್ಲಿ ತೊಡುವ ಬಳೆ.

**ಸುಮ್ಮಹಿಮನ** – ಸುಮಹಿಮನ, ಒಳ್ಳೆಯ ಹಿರಿಮೆಯುಳ್ಳವನ.

**ಚೌಕುಲಿ** – ಚೌಕುಳಿ, ಚವುಕುಳಿ, ಮರಾಠಿಯಲ್ಲಿ ಚೌಕಡಾ; ನಾಲ್ಕು ಮುತ್ತುಗಳನ್ನು ಕೂಡಿಸಿ ಮಾಡಿದ ಓಲೆ; ಚಚ್ಚೌಕನಾದ ಬಂಗಾರದ ಓಲೆಯೂ ಆಗಬಹುದು.

**ತಿಮ್ಮರಾಯ** – ತಿರುಮಲೆರಾಯ, ಬೆಟ್ಟದ ಮೇಲಿರುವ ದೇವರು.

**ಘಕ್ಕನೆ = ಫಕ್ಕನೆ** – ಇದ್ದಕ್ಕಿದ್ದಂತೆ, ಪೂರ್ವಸೂಚನೆಯಿಲ್ಲದೆ; ಸಮುದ್ರ ಮಥನದ ಸಂದರ್ಭದಲ್ಲಿ ವಿಷ್ಣುವು ಮೋಹಿನಿಯಂತೆ ಬಂದು ದೇವತೆಗಳಿಗೆ ಅಮೃತವನ್ನು ದೊರಕಿಸಿಕೊಟ್ಟು ಅಸುರರ ಕೈತಪ್ಪಿಸಿ ಕಣ್ಮರೆಯಾದ ಹಿನ್ನೆಲೆ.

**ಪಾಪವಿನಾಶಿನಿ** – ಬೆಟ್ಟದ ಮೇಲಿರುವ ಒಂದು ಕೊಳ; ಗುಡಿಯಿಂದ ಮೂರು ಮೈಲು ದೂರದಲ್ಲಿದೆ. ಮೊದಲಿಗೆ ದೇವರ ಅಭಿಷೇಕಕ್ಕೆ ನೀರನ್ನು ಇಲ್ಲಿಂದಲೇ ತರುತ್ತಿದ್ದರು.

**ಈ ಪರಿ** – ಈ ರೀತಿಯಲ್ಲಿರುವ ಮೂರ್ತಿಯನ್ನು.

**Classification:** Keerthane
**Ankita:** purandara vittala
**Location:** Tirupati
**Category:** Srinivasa Stuti, Krishna Stuti,
**Sub-Category:** ranga, srinivasa, Krishna, Devaki, Narasimha, gejje, kivi, puje, sakkare, benne, sura, amruta, asura, ravana, snana, sripati, dina, Tirupati, papa,
**Pravachana:** NA
**Explanation:** NA